**ಸಾಕ್ಷಿಗೆ ದಿನಾಂಕ:10-11-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಮುಂದುವರಿದ ಪಾಟೀ ಸವಾಲು :: ಆರೋಪಿ ಪರ ಶ್ರೀ.ಎಸ್ ಎನ್ ಎಂ ವಕೀಲರಿಂದ ::**

ತರೀಕೆರೆಯ ಭೀರಲಿಂಗೇಶ್ವರ ಫೈನಾನ್ಸ್ ಅನ್ನು ನಾನೇ ನೆಡೆಸುತ್ತಿದ್ದೇನೆ. ಸದರಿ ಸಂಸ್ಥೆಗೆ ನಾನೇ ಅಧ್ಯಕ್ಷನಾಗಿದ್ದು ನನ್ನ ಕುಟುಂಬದವರು ಸದಸ್ಯರಾಗಿರುತ್ತಾರೆ ಎಂದರೆ ಸರಿ. ನಿಪಿ-7 ಸದರಿ ಭೀರಲಿಂಗೇಶ್ವರ ಫೈನಾನ್ಸ್ ಗೆ ಸಂಬಂದಪಟ್ಟ 01.04.2020 ರಿಂದ 31.03.2021 ರವರೆಗಿನ ಸ್ಟೇಟ್‌ಮೆಂಟ್ ಆಗಿರುತ್ತದೆ ಎಂದರೆ ಸರಿ. ನಾನು ಆರೋಪಿಗೆ 12.11.2018 ರಂದು ಸಾಲವನ್ನು ನೀಡಿರುತ್ತೇನೆ. ಸದರಿ ಸಮಯದಲ್ಲಿ ಭೀರಲಿಂಗೇಶ್ವರ ಫೈನಾನ್ಸ್ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ. ಫೈನಾನ್ಸ್ ಗೆ ಸಂಬಂಧಪಟ್ಟ ತಿಂಗಳ ವ್ಯವಹಾರವನ್ನು ಎ.ಆರ್.ಸಿ.ಎಸ್. ರವರಿಗೆ ಸಲ್ಲಿಸಬೇಕಾಗಿರುತ್ತದೆ ಎಂದರೆ ಸರಿ. ಆ ರೀತಿ ಭೀರಲಿಂಗೇಶ್ವರ ಫೈನಾನ್ಸ್ ಗೆ ಸಂಬಂಧಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದೇಂದರೆ ಸಾಕ್ಷಿಯು ದಾಖಲಾತಿಗಳು ನನ್ನ ಆಡಿಟರ್ ಬಳಿ ಇರುತ್ತದೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಬ್ಯಾಕ್ ಸ್ಟೇಟ್‌ಮೆಂಟ್‌ಗಳಲ್ಲಿ ಆರೋಪಿಗೆ ನೀಡಿರುವ ವ್ಯವಹಾರ ಕಂಡುಬರುವುದಿಲ್ಲ ಎಂದರೆ ಸರಿ. ರೂ.20,000/- ಗಳಿಗಿಂತ ಅಧಿಕ ಹಣವನ್ನು ನಗದಿನ ಮುಖಾಂತರ ನೀಡಬಾರದೆಂದು ಕಾನೂನು ಇರುವ ಬಗ್ಗೆ ನನಗೆ ತಿಳಿದಿರುತ್ತದೆ. ನಿಪಿ-10 ನ್ನು ನಾನು ಖಾಸಗಿ ಇಂಜಿನಿಯರ್ ನಿಂದ ಮಾಡಿಸಿರುತ್ತೇನೆ ಎಂದರೆ ಸರಿ. ಲೇವಾದೇವಿ ಪರವಾಗಿನಿಗೆಯನ್ನು ನಿಪಿ-9 ರಂತೆ ಈ ಪ್ರಕರಣಕ್ಕೋಸ್ಕರ ಸುಳ್ಳಾಗಿ ಪಡೆದಿರುತ್ತೇನೆ ಎಂದರೆ ಸುಳ್ಳಲ್ಲ. ನಾನು ಹಾಜರುಪಡಿಸಿರುವ ಕ್ರಯಪತ್ರಗಳಿಗೆ ಸಂಬಂಧಪಟ್ಟಂತೆ ಯಾವುದೇ ಪಹಣಿ ಅಥಾವ ಮ್ಯುಟೇಶನ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-25 ರಂತೆ ಹಾಜರುಪಡಿಸಿರುವ ಅಡಿಕೆ ಚೇಣಿ ಕರಾರು ಪತ್ರವು 2014 ಸಾಲಿಗೆ ಸಂಬಂದಸಿಪಟ್ಟದಾಗಿರುತ್ತದೆ ಎಂದರೆ ಸರಿ. ನಾನು ಹಿಂದಿನ ಪಾಟೀ ಸವಾಲಿನಲ್ಲಿ ನಾನು ಯಾವ ವ್ಯಕ್ತಿಗಳ ಜೊತೆ ಚೇಣಿ ವ್ಯವಹಾರ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ನೋಟೀಸ್‌ನಲ್ಲಾಗಿಲಿ ಅಥವಾ ಪಿರ್ಯಾದಿಯಲ್ಲಾಗಲೀ ಯಾವ ಮೂಲದಿಂದ ಹಣ ಬಂದಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ಪತ್ನಿ ಪಟ್ಟಣ

ಪಂಚಾಯ್ತಿ ಸದ್ಯಸ್ಯರಾಗಿದ್ದ ಸಮಯದಲ್ಲಿ ಅವರು 5 ವರ್ಷದಲ್ಲಿ ಸಹ ಅಧ್ಯಕ್ಷರಾಗಿಲ್ಲ ಎಂದರೆ ಸರಿ. ಆರೋಪಿಯು 2 ತಿಂಗಳ ಕಾಲ ಪಟ್ಟಣ ಪಂಚಾಯ್ತಿಯಲ್ಲಿ ಅಧ್ಯಕ್ಷರು ಅಗಿದ್ದರು ಎಂದರೆ ಸರಿ. ನನಗೂ ಹಾಗೂ ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ಅಗದಿದ್ದರು ನನ್ನ ಹೆಂಡತಿಗೆ ಭದ್ರತೆಗೆ ನೀಡಿರುವ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಎರಡು ಸುಳ್ಳು ಪ್ರಕರಣಗಳನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡ ವ್ಯವಹಾರ ಮಾಡಲು ಪರವಾಗಿನಿಗೆ ಪಡೆದಿರುತ್ತಾರೋ ಇಲ್ಲವೋ ನನಗೆ ಗೋತ್ತಿಲ್ಲ. ನನ್ನ ಹೆಂಡತಿಯನ್ನು ಪಟ್ಟಣ ಪಂಚಾಯ್ತಿಯ ಅಧ್ಯಕ್ಷರನ್ನಾಗಿ ಮಾಡಲು ಆರೋಪಿಯು ಸಹಕರಿಸಿರುವುದಿಲ್ಲ ಎಂಬ ಉದ್ದೇಶದಿಂದ ಈ ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::